# ರಾಮಕೃಷ್ಣ ಸುದ್ದಿ ಸಂಚಯ

**ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ಲಿ., ಮಂಗಳೂರು**

ಇದರ ಮುಖವಾಣಿ ತ್ರೈಮಾಸಿಕ ಸುದ್ದಿ ಪತ್ರಿಕೆ

ESTD : 1994

ವಿಳಾಸ : 2ನೇ ಮಹಡಿ, ಅಮೃತೋತ್ಸವ ಕಟ್ಟಡ, ಬಂಟ್ಸ್ ಹಾಸ್ಟೆಲ್ ಸರ್ಕಲ್, ಮಂಗಳೂರು-575 003.

Website : www.ramakrishnacredit.com Email : ho@ramakrishnacredit.com

22 1994-2016 GROWTH DRIVEN BY PERFORMANCE

ಸಂಪುಟ : II | ಸಂಚಿಕೆ : 2 | ಎಲ್ಲರೂ ಒಬ್ಬನಿಗಾಗಿ, ಒಬ್ಬನು ಎಲ್ಲರಿಗಾಗಿ | ಜುಲೈ – ಸಪ್ಟೆಂಬರ್ 2016


## ಅಧ್ಯಕ್ಷರ ಮಾತು



ಶ್ರೀ ಕೆ. ಜೈರಾಜ್ ಬಿ. ರೈ
ಅಧ್ಯಕ್ಷರು

2016-17ನೇ ಸಾಲಿನ ಅರ್ಧ ವಾರ್ಷಿಕ ಅವಧಿ ಅಂತ್ಯಕ್ಕೆ ಸಂಘದ ಠೇವಣಿ ರೂ.133 ಕೋಟಿ, ಸಾಲ ಮತ್ತು ಮುಂಗಡ ರೂ.106.06 ಕೋಟಿಯಾಗಿ, ನಿವ್ವಳ ಲಾಭ ರೂ.1.56 ಕೋಟಿ ಗಳಿಸಿ, ಕಳೆದ ಇದೇ ಸಾಲಿನ ಅವಧಿಗಿಂತ ಒಟ್ಟು ವ್ಯವಹಾರದಲ್ಲಿ ಶೇ.15ರಷ್ಟು ವೃದ್ಧಿ ಸಾಧಿಸಿ ಒಟ್ಟು ರೂ.239 ಕೋಟಿಯಾಗಿ ಉತ್ತಮ ವ್ಯವಹಾರ ದಾಖಲಿಸಿರುವುದು ಹರ್ಷದಾಯಕ. ಈ ಅರ್ಧ ವಾರ್ಷಿಕ ಅವಧಿಗೆ ಶಾಖೆಗಳಿಗೆ ನಿಗದಿಪಡಿಸಿದ ಮುಖ್ಯ 15 ಗುರಿಗಳ ಪೈಕಿ ಎಲ್ಲಾ ಗುರಿಗಳನ್ನು ಸಾಧಿಸಿದ ವೆಲೆನ್ಸೀಯಾ ಶಾಖೆಗೆ ಹಾಗೂ 12 ಗುರಿಗಳನ್ನು ಸಾಧಿಸಿದ ಸುರತ್ಕಲ್ ಶಾಖೆಯ ಶಾಖಾಧಿಕಾರಿಗಳಿಗೆ ಅಭಿನಂದನೆಗಳು. ಉಳಿದ ಶಾಖೆಗಳು ಕೂಡ ಮುಂಬರುವ ಅವಧಿಯಲ್ಲಿ ನಿಗದಿತ ಗುರಿಯನ್ನು ಸಾಧಿಸಿ ಉತ್ತಮ ಪ್ರಗತಿಯನ್ನು ಹೊಂದಿ, ಸಂಘವು 2016-17ನೇ ಸಾಲಿನಾಂತ್ಯಕ್ಕೆ ನಿಗದಿತ ಎಲ್ಲಾ ಗುರಿಗಳನ್ನು ಸಾಧಿಸುವಂತಾಗಲು ಮುತುವರ್ಜಿಯಿಂದ ಕರ್ತವ್ಯ ನಿರ್ವಹಿಸಲು ಎಲ್ಲಾ ಶಾಖಾಧಿಕಾರಿಗಳಿಗೆ ಹಾಗೂ ಸಿಬ್ಬಂದಿಗಳಿಗೆ ಈ ಮೂಲಕ ಕರೆಯನ್ನು ನೀಡುತ್ತಿದ್ದೇವೆ.

## ಸಂಘದ 17ನೇ ಬ್ರಹ್ಮಾವರ ಶಾಖೆಯ ಉದ್ಘಾಟನೆ

ನಮ್ಮ ಸಂಘದ 17ನೇ ಶಾಖೆ ಬ್ರಹ್ಮಾವರದ ಮಧುವನ್ ಕಮರ್ಶಿಯಲ್ ಕಾಂಪ್ಲೆಕ್ಸ್‌ನಲ್ಲಿ ದಿನಾಂಕ 21.10.2016 ಶುಕ್ರವಾರದಂದು ಉದ್ಘಾಟನೆಗೊಂಡಿತು.

ಮೀನುಗಾರಿಕೆ, ಯುವಜನ ಸೇವಾ ಮತ್ತು ಕ್ರೀಡೆ ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಮೋದ್ ಮಧ್ವರಾಜ್ ಅವರು ನೂತನ ಶಾಖೆ ಉದ್ಘಾಟಿಸಿ ಮಾತನಾಡಿ, ಒಂದು ಹಣಕಾಸು ಸಂಸ್ಥೆಗೆ ಸಾಲ ಪಡಕೊಳ್ಳುವವರ ಮನೋಭಾವ, ಸಿಬ್ಬಂದಿಗಳ ಕಾರ್ಯದಕ್ಷತೆ, ಹಾಗೂ ಆಡಳಿತ ಮಂಡಳಿಯ ಕಾರ್ಯ ನಿರ್ವಹಣೆ ಈ ಮೂರು ಅಂಶಗಳು ಬಹಳ ಮುಖ್ಯವಾದುದು ಇವುಗಳು ಚೆನ್ನಾಗಿದ್ದರೇ ಅಂತಹ ಸಂಸ್ಥೆ ಶ್ರೇಯೋಭಿವೃದ್ಧಿ ಹೊಂದುತ್ತದೆ, ಸಂಘ ಹಾಗೂ ಸಂಘದ ಬ್ರಹ್ಮಾವರ ಶಾಖೆಯು ಕೂಡ ಇದೇ ರೀತಿಯಲ್ಲಿ ಪ್ರಗತಿ ಸಾಧಿಸಲಿ ಎಂದು ಹಾರೈಸಿದರು.

ಸಂಘದ ಅಧ್ಯಕ್ಷರಾದ ಕೆ. ಜೈರಾಜ್ ಬಿ. ರೈಯವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಅಧ್ಯಕ್ಷ ಭಾಷಣದಲ್ಲಿ ಸಂಘದ ಪ್ರಗತಿಯ ಬಗ್ಗೆ ವಿವರಗಳನ್ನು ನೀಡಿ ಸಂಘದ ಕಾರ್ಯ ವೈಖರಿ ವಿಶೇಷತೆ ಎಂದರೆ, ಸಂಘದ ಅನುತ್ಪಾದಕ ಆಸ್ತಿ ಹೊರಬಾಕಿ ಸಾಲದ ಶೇ.0.13ಕ್ಕೆ ಸೀಮಿತ ಹೊಂದಿದ್ದು, ನಿವ್ವಳ ಅನುತ್ಪಾದಕ ಆಸ್ತಿ ಶೂನ್ಯ ಪ್ರಮಾಣದಲ್ಲಿದೆ. ಸಂಘದ 2015-16ನೇ ಸಾಲಿಗೆ ರೂ.3.85 ಕೋಟಿ ನಿವ್ವಳ ಲಾಭದಲ್ಲಿ ಸದಸ್ಯರಿಗೆ ಶೇ.22ರಷ್ಟು ಡಿವಿಡೆಂಡ್ ನೀಡಲಾಗಿದೆ ಎಂದು ತಿಳಿಸಿ, ಬ್ರಹ್ಮಾವರದಲ್ಲಿ ಶಾಖೆಯನ್ನು ಆರಂಭಿಸಲು ಸಹಕಾರ ನೀಡಿದವರೆಲ್ಲರಿಗೂ ಕೃತಜ್ಞತೆಯನ್ನು ವ್ಯಕ್ತಪಡಿಸಿದರು.



ನಿರ್ದೇಶಕರಾದ ಕೆ.ಸೀತಾರಾಮ ರೈ ಸ್ವಾಗತಿಸಿ, ರವೀಂದ್ರನಾಥ ಜಿ. ಹೆಗ್ಡೆ ಪ್ರಸ್ತಾವಿಕ ಭಾಷಣ ಮಾಡಿದರು.

ಉಡುಪಿ ಜಿ.ಪಂ. ಉಪಾಧ್ಯಕ್ಷೆ ಶೀಲಾ ಕೆ. ಶೆಟ್ಟಿ, ಸಹಕಾರಿ ಸಂಘಗಳ ಉಪನಿಬಂಧಕ ಪ್ರವೀಣ್ ಬಿ. ನಾಯಕ್, ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಶ್ರೀಮತಿ ಚಂದ್ರ ಪ್ರತಿಮಾ, ಚಾಂತಾರು ಗ್ರಾ.ಪಂ. ಅಧ್ಯಕ್ಷೆ ಸರಸ್ವತಿ ನ್ಯಾಕ್, ಕಟ್ಟಡ ಮಾಲಕ ಶ್ಯಾಮ ಕೆ. ಪೂಜಾರಿ, ಸಂಘದ ನಿರ್ದೇಶಕರುಗಳಾದ ಡಾ। ಕೆ. ಸುಭಾಶ್ಚಂದ್ರ ಶೆಟ್ಟಿ, ಸಿಎ ಎಚ್.ಆರ್. ಶೆಟ್ಟಿ, ವಿಠಲ ಪಿ. ಶೆಟ್ಟಿ, ಎಂ. ರಾಮಯ ಶೆಟ್ಟಿ, ಎಂ. ಸೀತಾರಾಮ ಶೆಟ್ಟಿ, ಅರುಣ್ ಕುಮಾರ್ ಶೆಟ್ಟಿ, ರವೀಂದ್ರನಾಥ ಜಿ. ಹೆಗ್ಡೆ, ಬಿ.ದಯಾಕರ ಆಳ್ವ, ಬೆಳ್ಳಿಪಾಡಿ ಪ್ರಸಾದ್ ಕೌಶಲ್ ಶೆಟ್ಟಿ, ಡಾ। ಎಂ. ಸುಧಾಕರ ಶೆಟ್ಟಿ ಪ್ರಭಾರ ಮಹಾಪ್ರಬಂಧಕ ಗಣೇಶ್ ಜಿ.ಕೆ. ಉಪಸ್ಥಿತರಿದ್ದರು. ಕಾರ್ಯಕ್ರಮದ ಕೊನೆಯಲ್ಲಿ ಶಾಖಾಧಿಕಾರಿ ಶ್ರೀ ಪ್ರಭಾಕರ್ ವಂದಿಸಿದರು.

# ಸಂಘದ 22ನೇ ವಾರ್ಷಿಕ ಮಹಾಸಭೆ 2015-16ನೇ ಸಾಲಿಗೆ ಶೇ.22 ಡಿವಿಡೆಂಡ್




ಸಂಘದ 22ನೇ ವಾರ್ಷಿಕ ಮಹಾಸಭೆಯಲ್ಲಿ ದಿನಾಂಕ 18.09.2016ರಂದು ಸಂಘದ ಅಧ್ಯಕ್ಷರಾದ ಶ್ರೀ ಕೆ.ಜೈರಾಜ್ ಬಿ. ರೈಯವರ ಅಧ್ಯಕ್ಷತೆಯಲ್ಲಿ ಮಂಗಳೂರಿನ ಉರ್ವಚರ್ಚ್ ಸೆಂಟನರಿ ಹಾಲಿನಲ್ಲಿ ಜರಗಿತು. 2015-16ನೇ ಸಾಲಿನಲ್ಲಿ ಸಂಘವು ರೂ.3.85 ಕೋಟಿ ನಿವ್ವಳ ಲಾಭ ಗಳಿಸಿದ್ದು, ಅದನ್ನು ವಾರ್ಷಿಕ ಮಹಾಸಭೆಯಲ್ಲಿ ವಿಂಗಡಿಸಿ ಸದಸ್ಯರಿಗೆ ಈ ಸಾಲಿಗೆ ಶೇ.22 ಡಿವಿಡೆಂಡ್ ನೀಡಲು ಸರ್ವಾನುಮತದಿಂದ ನಿರ್ಧರಿಸಲಾಯಿತು.

ಬ್ರಹ್ಮಾವರ ಮತ್ತು ತೊಕ್ಕೊಟ್ಟಿನಲ್ಲಿ 2016ರ ಅಕ್ಟೋಬರ್‌ನೊಳಗೆ ಹೊಸ ಶಾಖೆಗಳನ್ನು ಆರಂಭಿಸುವುದು, ಅಲ್ಲದೆ ಪ್ರಸ್ತುತ ಸಾಲಿನಲ್ಲಿ ಇನ್ನೂ ಎರಡು ಹೊಸ ಶಾಖೆಗಳನ್ನು ಹಾಗೂ ಮೂರು ಶಾಖೆಗಳನ್ನು ನವೀಕರಿಸಲು ಕಾರ್ಯಯೋಜನೆಯನ್ನು ಹಮ್ಮಿಕೊಳ್ಳಲಾಗಿರುವುದನ್ನು ಹಾಗೂ ಸಂಘವು ವರದಿ ವರ್ಷದಲ್ಲಿ, ಸದಸ್ಯರಿಗೆ ನೀಡುತ್ತಿರುವ ಸೇವೆಯನ್ನು ಇನ್ನಷ್ಟು ದಕ್ಷ ರೀತಿಯಲ್ಲಿ ನಿರ್ವಹಿಸುವ ನಿಟ್ಟಿನಲ್ಲಿ ತಂತ್ರಜ್ಞಾನ ಬಳಕೆಗೆ ಆದ್ಯತೆಯನ್ನು ನೀಡಿ, ಅದಕ್ಕೆ ಪೂರಕವಾಗಿ ಫೇಕ್ ನೋಟ್ ಡಿಟೆಕ್ಷನ್ ಮೆಷಿನ್, ನೋಟ್ ಕೌಂಟಿಂಗ್ ಮೆಷಿನ್, ಎಸ್.ಬಿ. ಪಾಸ್ ಬುಕ್ ಪ್ರಿಂಟರ್, ನಿತ್ಯ ನಿಧಿ ಕಲೆಕ್ಷನ್ ಮೆಷಿನ್, ಡಿಸ್‌ಪ್ಲೇ ಫಲಕ, ಲೇಸರ್ ಪ್ರಿಂಟರ್, ಬಯೋಮೆಟ್ರಿಕ್ ಮೆಷಿನ್‌ಗಳನ್ನು, ಎಸ್.ಎಂ.ಎಸ್. ಅಲರ್ಟ್ ಸೌಲಭ್ಯಗಳನ್ನು ಹಾಗೂ ಭದ್ರತಾ ವ್ಯವಸ್ಥೆಯನ್ನು ಬಲಿಷ್ಠಗೊಳಿಸಲು ಎಲ್ಲಾ ಶಾಖೆಗಳ ಭದ್ರತಾ ಕೊಠಡಿಗಳಿಗೆ ಮೋಷನ್ ಸೆನ್ಸರ್‌ಡಿವೈಸ್ ಹಾಗೂ ಸಿಸಿ ಟಿವಿ ಸಿಸ್ಟಂಗಳನ್ನು ಈಗಾಗಲೇ ಅಳವಡಿಸಲಾಗಿದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ಹೊಸ ತಂತ್ರಜ್ಞಾನಗಳನ್ನು ಹಾಗೂ ಅಳವಡಿಸಲಾದ ತಂತ್ರಜ್ಞಾನಗಳನ್ನು ಇನ್ನಷ್ಟು ಉನ್ನತೀಕರಿಸಿಕೊಳ್ಳಲು ಕಾರ್ಯಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಆಡಳಿತ ಮಂಡಳಿಯ ವರದಿಯನ್ನು ಮಂಡಿಸುತ್ತಾ ಸಂಘದ ಅಧ್ಯಕ್ಷ ಶ್ರೀ ಕೆ. ಜೈರಾಜ್ ಬಿ. ರೈಯವರು ತಿಳಿಸಿದರು.

ನಿರ್ದೇಶಕರಾದ ಶ್ರೀ ಕೆ.ಸೀತಾರಾಮ ರೈಯವರು ಸ್ವಾಗತಿಸಿದರು. ಉಪಾಧ್ಯಕ್ಷರಾದ ಶ್ರೀಮತಿ ಲಕ್ಷ್ಮಿ ಜಯಪಾಲ ಶೆಟ್ಟಿ ಹಾಗೂ ನಿರ್ದೇಶಕರುಗಳಾದ ಶ್ರೀಮತಿ ಎ. ರತ್ನಕಾಂತಿ ಶೆಟ್ಟಿ, ಡಾ। ಕೆ.ಸುಭಾಷ್ಚಂದ್ರ ಶೆಟ್ಟಿ, ಶ್ರೀ ಪಿ. ಶಿವರಾಮ ಅಡ್ಯಂತಾಯ, ಸಿಎ ಎಚ್.ಆರ್. ಶೆಟ್ಟಿ, ಶ್ರೀ ವಿಠಲ ಪಿ.ಶೆಟ್ಟಿ, ಶ್ರೀ ಎಂ. ಸೀತಾರಾಮ ಶೆಟ್ಟಿ, ಶ್ರೀ ಅರುಣ್‌ಕುಮಾರ್ ಶೆಟ್ಟಿ, ಶ್ರೀ ಪಿ.ಬಿ. ದಿವಾಕರ ರೈ, ಶ್ರೀ ರವೀಂದ್ರನಾಥ ಜಿ. ಹೆಗ್ಡೆ, ಶ್ರೀ ಬಿ.ದಯಾಕರ್ ಆಳ್ವ, ಬೆಳ್ಳಿಪಾಡಿ ಶ್ರೀ ಪ್ರಸಾದ್ ಕೌಶಲ್ ಶೆಟ್ಟಿ, ಡಾ। ಎಂ. ಸುಧಾಕರ ಶೆಟ್ಟಿರವರು ಉಪಸ್ಥಿತರಿದ್ದರು.

ಪ್ರಭಾರ ಮಹಾಪ್ರಬಂಧಕರಾದ ಶ್ರೀ ಗಣೇಶ್ ಜಿ.ಕೆ.ಯವರು ಲೆಕ್ಕಪರಿಶೋಧಿತ ಆರ್ಥಿಕ ತಃಖ್ತೆ, ಲಾಭ ವಿಂಗಡನೆ, ಬಜೆಟ್, ಬೈಲಾ ತಿದ್ದುಪಡಿ ಪ್ರಸ್ತಾವನೆಗಳನ್ನು ಮಂಡಿಸಿದರು. ಸಂಘದ 2016-17ನೇ ಸಾಲಿನ ಲೆಕ್ಕಪರಿಶೋಧಕರಾಗಿ ಸಿಎ ಸುದೇಶ್ ಕುಮಾರ್ ರೈಯವರನ್ನು ಈ ಸಂದರ್ಭದಲ್ಲಿ ಆಯ್ಕೆ ಮಾಡಲಾಯಿತು. ಕಾರ್ಯಕ್ರಮದ ಕೊನೆಯಲ್ಲಿ ನಿರ್ದೇಶಕರಾದ ಶ್ರೀ ಎಂ. ರಾಮಯ ಶೆಟ್ಟಿಯವರು ವಂದಿಸಿದರು.

## ಅಭಿನಂದನೆಗಳು

ವರ್ತಕರ ಸಂಘ ಸುಳ್ಯ ಇದರ ಅಧ್ಯಕ್ಷರಾಗಿ ಪುನರಾಯ್ಕೆಯಾದ ಸಂಘದ ಸುಳ್ಯ ಶಾಖೆಯ ಶಾಖಾ ಸಲಹಾ ಸಮಿತಿ ಸದಸ್ಯರಾದ ಶ್ರೀ ಪಿ.ಬಿ. ಸುಧಾಕರ ರೈಯವರಿಗೆ ಹೃತ್ಪೂರ್ವಕ ಅಭಿನಂದನೆಗಳು.

## ಶ್ರದ್ಧಾಂಜಲಿ

ವೆಲೆನ್ಸಿಯಾ ಶಾಖೆಯ ಅಕೌಂಟೆಂಟ್ ಶ್ರೀಮತಿ ನಂದಿತಾ ಆಚಾರ್ಯರವರ ತೀರ್ಥರೂಪರಾದ ಶ್ರೀ ದಿವಾಕರ ಆಚಾರ್ಯರು ದೈವಾಧೀನರಾಗಿರುವರು. ಅಗಲಿದ ದಿವ್ಯಾತ್ಮಕ್ಕೆ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇವೆ.

## ಹುಟ್ಟು ಹಬ್ಬದ ಶುಭಾಶಯಗಳು

| ಸಿಬ್ಬಂದಿಗಳ ಹೆಸರು ಮತ್ತು ಶಾಖೆ | |
|---|---|
| ಶ್ರೀಮತಿ ಯಶೋಧ ನ್ಯಾಕ್, ಉಡುಪಿ | ಶ್ರೀ ಸಂತೋಷ್, ಕುಂದಾಪುರ |
| ಶ್ರೀ ಅಣ್ಣಪ್ಪ ಶೆಟ್ಟಿ, ಉಡುಪಿ | ಶ್ರೀಮತಿ ನಂದಿತಾ ಆಚಾರ್ಯ, ವೆಲೆನ್ಸಿಯಾ |
| ಶ್ರೀಮತಿ ಸವಿತಾ ಪೂಂಜಾ, ಮಂಗಳೂರು | |

## ವರ್ಗಾವಣೆ

| ಸಿಬ್ಬಂದಿ ಹೆಸರು | ಶಾಖೆ | ಸಿಬ್ಬಂದಿ ಹೆಸರು | ಶಾಖೆ |
|---|---|---|---|
| ಶ್ರೀ ಪ್ರಭಾಕರ್ | ಬ್ರಹ್ಮಾವರ | ಶ್ರೀ ಗೋಪಾಲಕೃಷ್ಣ ಪಿ. | ತೊಕ್ಕೊಟ್ಟು |
| ಶ್ರೀ ಮಿಥುನ್‌ಚಂದ್ರ | ಬ್ರಹ್ಮಾವರ | ಶ್ರೀ ಅಣ್ಣಪ್ಪ ಶೆಟ್ಟಿ | ಉಡುಪಿ |

# 2016–17ನೇ ಸಾಲಿನ ಅರ್ಧವಾರ್ಷಿಕ ಅವಧಿ ದಿನಾಂಕ 30.09.2016ಕ್ಕೆ ಇದ್ದಂತೆ ಪ್ರಗತಿಯ ಪಕ್ಷಿನೋಟ

| ಕ್ರ.ಸಂ. | ಕಾರ್ಯ ವಿಭಾಗ | ಸಪ್ಟೆಂಬರ್ 2015ಕ್ಕೆ ಇದ್ದಂತೆ | ಸಪ್ಟೆಂಬರ್ 2016ಕ್ಕೆ ಇದ್ದಂತೆ | ಹೆಚ್ಚಳ (ರೂ) | ಶೇ. |
|---|---|---|---|---|---|
| 1 | ಠೇವಣಾತಿಗಳು | 123.24 ಕೋಟಿ | 132.57 ಕೋಟಿ | 9.33 ಕೋಟಿ | 8% |
| 2 | ಸಾಲ ಮತ್ತು ಮುಂಗಡ | 84.61 ಕೋಟಿ | 106.77 ಕೋಟಿ | 22.16 ಕೋಟಿ | 26% |
| 3 | ನಿವ್ವಳ ಲಾಭ | 1.11 ಕೋಟಿ | 1.56 ಕೋಟಿ | 45 ಲಕ್ಷ | 40% |
| 4 | ಒಟ್ಟು ಅನುತ್ಪಾದಕ ಆಸ್ತಿ | | | | |
| | 1) ಮೊಬಲಗು | 25.58 ಲಕ್ಷ | 26.15 ಲಕ್ಷ | 57 ಸಾವಿರ | |
| | 2) ಶೇಕಡ | 0.30% | 0.25% | –0.05% | |
| | 3) ನಿವ್ವಳ ಅನುತ್ಪಾದಕ ಆಸ್ತಿ | Nil | Nil | Nil | |
| **5** | **ಒಟ್ಟು ವ್ಯವಹಾರ** | **207.85 ಕೋಟಿ** | **239.33 ಕೋಟಿ** | **31.49 ಕೋಟಿ** | **15%** |

## ಕಾರ್ಕಳ ಶಾಖೆ ಹವಾನಿಯಂತ್ರಿತ ನವೀಕೃತ ಕಛೇರಿಯ ಉದ್ಘಾಟನೆ



ಸಂಘದ ಕಾರ್ಕಳ ಶಾಖೆಯಲ್ಲಿ ಹವಾನಿಯಂತ್ರಿತ ನವೀಕೃತ ಕಛೇರಿಯನ್ನು ದಿನಾಂಕ 08.09.2016 ಗುರುವಾರದಂದು ಸಂಘದ ಅಧ್ಯಕ್ಷ ಶ್ರೀ ಕೆ.ಜೈರಾಜ್ ಬಿ. ರೈ ಉದ್ಘಾಟಿಸಿದರು. ಗ್ರಾಹಕರಿಗೆ ಸೊಸೈಟಿಯ ಮೇಲಿರುವ ಅಗಾಧವಾದ ನಂಬಿಕೆ ಮತ್ತು ಪ್ರತೀ ಗ್ರಾಹಕನಿಂದಲೂ ಸಿಗುತ್ತಿರುವ ಸಹಕಾರದಿಂದ ಸೊಸೈಟಿ ಯಶಸ್ವಿ ಹಂತವನ್ನು ತಲುಪಿದೆ. ಇದೀಗ ನವೀಕೃತ ಕಛೇರಿಯಿಂದ ಕೂಡ ಗ್ರಾಹಕರಿಗೆ ಉತ್ತಮ ಸಹಕಾರ ಮತ್ತು ಸೌಲಭ್ಯಗಳು ಲಭಿಸಲಿದೆ ಎಂದು ತನ್ನ ಉದ್ಘಾಟನಾ ಭಾಷಣದಲ್ಲಿ ಅಧ್ಯಕ್ಷರು ತಿಳಿಸಿದರು.

ಶಾಖಾ ಸಲಹಾ ಸಮಿತಿಯ ಅಧ್ಯಕ್ಷ ಶ್ರೀ ಎಂ. ಶಿವರಾಮ ಶೆಟ್ಟಿ ಮಾತನಾಡಿ, ಕಲ್ಪನೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಆಡಳಿತ ಮಂಡಳಿಯು ನಡೆಸಿರುವ ಶ್ಲಾಘನೀಯ ಪ್ರಯತ್ನದಿಂದ ರಾಷ್ಟ್ರೀಕೃತ ಬ್ಯಾಂಕ್‌ಗಳಿಗೂ ಕಡಿಮೆ ಇಲ್ಲದಂತೆ ನಮ್ಮ ಸಂಘವು ಸೇವೆ ನೀಡುತ್ತಿದೆ ಎಂದು ಶ್ಲಾಘಿಸಿದರು.

ಸಂಘದ ನಿರ್ದೇಶಕರಾದ ಯಂ. ರಾಮಯ ಶೆಟ್ಟಿ, ಡಾ। ಸುಧಾಕರ ಶೆಟ್ಟಿ, ಪ್ರಭಾರ ಮಹಾಪ್ರಬಂಧಕ ಗಣೇಶ್ ಜಿ.ಕೆ. ಮತ್ತು ಶಾಖಾ ಸಲಹಾ ಸಮಿತಿ ಸದಸ್ಯರುಗಳು ಉಪಸ್ಥಿತರಿದ್ದರು. ಪ್ರಶಾಂತ್ ಆರ್. ಶೆಟ್ಟಿ ಸ್ವಾಗತಿಸಿದರು. ಸಾಣೂರು ಮೋಹನ್‌ದಾಸ್ ಜಿ. ಪ್ರಭು ಕಾರ್ಯಕ್ರಮ ನಿರೂಪಿಸಿದರು. ಶಾಖಾ ವ್ಯವಸ್ಥಾಪಕ ವಿರಾಜ್ ಜೆ. ಶೆಟ್ಟಿ ವಂದಿಸಿದರು.

## ಸಂಘದ 18ನೇ ತೊಕ್ಕೊಟ್ಟು ಶಾಖೆಯ ಉದ್ಘಾಟನೆ



ಸಂಘದ 18ನೇ ಶಾಖೆಯನ್ನು ತೊಕ್ಕೊಟ್ಟಿನಲ್ಲಿ ದಿನಾಂಕ 31.10.2016 ಸೋಮವಾರದಂದು ಉದ್ಘಾಟಿಸಲಾಯಿತು. ಶಾಖೆಯ ಉದ್ಘಾಟನೆಯನ್ನು ಸಂಘದ ಅಧ್ಯಕ್ಷ ಶ್ರೀ ಕೆ. ಜೈರಾಜ್ ಬಿ. ರೈಯವರು ದೀಪ ಬೆಳಗಿಸಿ ನೆರವೇರಿಸಿದರು. ಈ ಸಂದರ್ಭದಲ್ಲಿ ಸಂಘದ ನಿರ್ದೇಶಕರುಗಳಾದ ಶ್ರೀ ಸೀತಾರಾಮ ರೈ ಸವಣೂರು, ಡಾ। ಸುಭಾಶ್ಚಂದ್ರ ಶೆಟ್ಟಿ, ಶ್ರೀ ಪಿ.ಶಿವರಾಮ ಅಡ್ಯಂತಾಯ, ಸಿ.ಎ.ಎಚ್.ಆರ್. ಶೆಟ್ಟಿ, ಶ್ರೀ ಯಂ. ರಾಮಯ ಶೆಟ್ಟಿ, ಶ್ರೀ ಎಂ.ಸೀತಾರಾಮ ಶೆಟ್ಟಿ, ಶ್ರೀ ರವೀಂದ್ರನಾಥ ಜಿ. ಹೆಗ್ಡೆ, ಡಾ। ಎಂ.ಸುಧಾಕರ ಶೆಟ್ಟಿ, ಪ್ರಭಾರ ಮಹಾಪ್ರಬಂಧಕರಾದ ಶ್ರೀ ಗಣೇಶ್ ಜಿ.ಕೆ. ಹಾಗೂ ಶಾಖಾಧಿಕಾರಿ ಶ್ರೀ ಗೋಪಾಲಕೃಷ್ಣ ಪಿ. ಮೊದಲಾದವರು ಉಪಸ್ಥಿತರಿದ್ದರು.

# 2015–16ನೇ ಸಾಲಿನಲ್ಲಿ ಅತ್ಯುತ್ತಮ ಶಾಖಾ ಪ್ರಶಸ್ತಿ ವಿಜೇತ ಶಾಖೆಗಳು

**ವಿಭಾಗ–1**



ಪ್ರಥಮ: ಬಿ.ಸಿ.ರೋಡ್



ದ್ವಿತೀಯ : ವೆಲೆನ್ಸೀಯಾ

**ವಿಭಾಗ–2**



ಪ್ರಥಮ: ವಿಟ್ಲ



ದ್ವಿತೀಯ : ಬೈಂದೂರು

ಮಹಾಸಭೆಯಲ್ಲಿ ಅತ್ಯುತ್ತಮ ಶಾಖಾ ಪ್ರಶಸ್ತಿ ಸ್ವೀಕರಿಸಿದ ಶಾಖಾ ಸಲಹಾ ಸಮಿತಿ ಅಧ್ಯಕ್ಷರಿಗೆ, ಶಾಖಾ ಪ್ರಬಂಧಕರಿಗೆ ಹಾಗೂ ಉಸ್ತುವಾರಿ ನಿರ್ದೇಶಕರಿಗೆ ಹಾರ್ದಿಕ ಅಭಿನಂದನೆಗಳು.

## 31.03.2016ರ ವರ್ಷಾಂತ್ಯ ತಃಖ್ತೆಗಳನ್ನು ಶೀಘ್ರವಾಗಿ ಸಲ್ಲಿಸಿದ ಶಾಖೆಗಳಿಗೆ ಪುರಸ್ಕಾರ

ಪ್ರಥಮ



ವೆಲೆನ್ಸೀಯಾ ಶಾಖೆ

ದ್ವಿತೀಯ



ವಿಟ್ಲ ಶಾಖೆ

ತೃತೀಯ



ಬಿ.ಸಿ.ರೋಡ್ ಶಾಖೆ

Private Circulation only

**BOOK-POST**

**To,**

If not delivered please return to :

**SRI RAMAKRISHNA CREDIT CO-OP. SOCIETY LTD.**

2nd Floor, Amruthotsava Building, Bunts Hostel Circle, Mangalore - 575 003.